

# ಯೋಗದಾಗೆ ಎಲ್ಲಾ ಐತೆ

### ಜ್ಞಾನಾಮೃತ

'ಯೋಗದಾಗೆ ಎಲ್ಲಾ ಐತೆ' (ಜೂ. 26, ಶಿವಪ್ರಕಾಶ್ ಭೋಗಣ್ಣ) ಲೇಖನ ಅರ್ಥಪೂರ್ಣವಾಗಿದೆ. ಭಾರತದ ಕೊಡುಗೆ, ಪುರಾತನ ಮಹಾವಿದ್ಯೆ ಯೋಗ. ಮಹಾಭಾರತದ ಶ್ರೀಕೃಷ್ಣ, ಆದಿಯೋಗಿ ಶಿವನಿಂದ ಹಿಡಿದು ಪತಂಜಲಿ ಮಹರ್ಷಿಗಳ ಚಿಂತನಾಲಹರಿಯಲ್ಲಿ ಮೂಡಿಬಂದ ಯೋಗ ಒಂದು ವಿಜ್ಞಾನ, ಕಲೆ, ಏಕಾಗ್ರತೆ, ಶಿಸ್ತಿನ ಜೀವನಕ್ರಮ. ಸುಂದರ ಜೀವನ ನಡೆಸುವ ಮಹಾವಿದ್ಯೆಯ ಬಗ್ಗೆ ಲೇಖಕರು ಮನಮುಟ್ಟುವಂತೆ ವಿವರಿಸಿದ್ದಾರೆ.

—ಕೆ.ಎಂ. ಕೊಟ್ರಸ್ವಾಮಿ, ಸಂಡೂರು

### ಉಪಯುಕ್ತ ಲೇಖನಗಳು

ಯೋಗ ದಿನದ ಲೇಖನಗಳು ವಿಶೇಷವಾಗಿವೆ. ನಾನು ಕೂಡ ಸುಮಾರು 18 ವರ್ಷಗಳಿಂದ ಯೋಗ ಶಿಕ್ಷಕಿಯಾಗಿದ್ದು, ಗರ್ಭಿಣಿಯರಿಗೆ ಸಹಜ ಪ್ರಸವಕ್ಕೆ ನೆರವಾಗುವ ವಿಶೇಷ ಯೋಗ ಭಂಗಿಗಳನ್ನು ಕಲಿಸಿದ್ದೇನೆ ಎಂದು ತಿಳಿಸಲು ಹೆಮ್ಮೆ. 'ಕೆಲಸದ ಜೊತೆಗೆ ಯೋಗ', 'ಚಂದ ಕಾಣಾಕ ಮುಖ ಯೋಗ' ಲೇಖನಗಳೂ ಚೆನ್ನಾಗಿವೆ.

—ಕಮಲಾದೇವಿ ರಾಜಶೇಖರ ಹಳ್ಳೂರ, ಬೆಂಗಳೂರು

### ವಿಭಿನ್ನ ವಿಚಾರ ಪ್ರಸ್ತುತಿ

ಯೋಗದಾಗ ಏನೈತೆ ಸುಖಾ ಸುಮ್ನೆ ಕೂರೋದು, ಮೈಕೈ ಅಲ್ಲಾಡಿಸೋದು ಎಂದು ಹೀಗಳೆಯುತ್ತಾ, ಅದಕ್ಕಿಂತ ಮನೆ ಕೆಲಸ ಮಾಡಿದರೆ ಒಳ್ಳೆಯದು ಎಂದು ಯೋಗ ಮಾಡಲು ಮೊಂಡು ಬೀಳುತ್ತಿದ್ದ ನನ್ನಂತಹವರಿಗೆ ಯೋಗದ ಕುರಿತಂತೆ ವಿಭಿನ್ನ ರೀತಿಯ ವಿಚಾರಗಳನ್ನು ಪ್ರಸ್ತುತಪಡಿಸಿ 'ಯೋಗದಾಗ ಎಲ್ಲಾ ಐತೆ' ಎಂದು ತೋರಿಸಿಕೊಟ್ಟ ಲೇಖನಗಳು ಆಲೋಚನಾ ಕ್ರಮವನ್ನು ಬದಲಿಸಿದೆ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

### ಸುಂದರ ನಿರೂಪಣೆ

'ಕಾಲ ಚಕ್ರಕ್ಕೇ ರೆಸ್ಟು ಕೊಟ್ಟುಬಿಡ್ತಿದ್ದೆ' (ಜೂ. 26, ಸಂಧ್ಯಾ ಹೊನಗುಂಟಿಕರ್) ಬರಹ ತುಂಬಾ ಚೆನ್ನಾಗಿದೆ. ಗಂಡು ಹೆತ್ತವರ ಸಂಕಟವನ್ನು ವಾಸ್ತವಿಕವಾಗಿ ಹಂಚಿಕೊಂಡಿದ್ದಾರೆ. ಸುಮಾರು ಎರಡು ದಶಕಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಅಂದು ಗಂಡು ಹೆತ್ತವರ ಬಿಗುಮಾನ, ಷರತ್ತುಗಳಿಂದ ಹೆಣ್ಣು ಹೆತ್ತವರು ನಿಟ್ಟುಸಿರು ಬಿಟ್ಟು ಏಕಾದರೂ ಹೆಣ್ಣುಗಳನ್ನು ಹೆತ್ತಿದ್ದೇವೆ ಎಂದು ಪರಿತಾಪ ಪಡುತ್ತಿದ್ದರು. ಇಂದು ಎಲ್ಲ ಬದಲಾಗಿದೆ. ಭಾಷಾಶೈಲಿ ಬಹಳ ಚೆನ್ನಾಗಿದೆ.

—ಸೇತುರಾವ್ ಕುಲಕರ್ಣಿ, ಬೆಂಗಳೂರು



### ಭಾಷೆಯ ರಸದೌತಣ

ಹೊಸದಾಗಿ ಶುರುವಾಗಿರುವ 'ಚೆನ್ನುಡಿ' ಅಂಕಣ, ಓದುಗರಿಗೆ ಭಾಷೆಯ ರಸದೌತಣವನ್ನೇ ಉಣಬಡಿಸುತ್ತಿದೆ. ಕನ್ನಡ ಭಾಷೆಯು ಬೇರೆ ಬೇರೆ ಪ್ರಾಂತ್ಯಕ್ಕೆ ತಕ್ಕಂತೆ ಅದರದೇ ಆದ ಶೈಲಿಯಲ್ಲಿ ಸುಂದರವಾಗಿ ರೂಪುಗೊಂಡಿದೆ. ಭಾಷೆಯ ವೈವಿಧ್ಯ ತಿಳಿಯಲು ಅಂಕಣ ತುಂಬಾ ಸಹಾಯಕ. ಇದರೊಂದಿಗೆ, ಲೇಖನದ ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ನೀಡಿರುವುದು ಸ್ಥಳೀಯ ಉಚ್ಚಾರಣಾ ಶೈಲಿಯನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. ನಮ್ಮ ಜಿಲ್ಲೆಯ ಸರದಿಯ ಬರುವಿಕೆಗೆ ಕಾಯುವಂತಾಗಿದೆ.

—ಆಶಾ ಅಪ್ರಮೇಯ, ದಾವಣಗೆರೆ

### ಉಲ್ಟಾ ಪಲ್ಟಾ

ಬ್ರಹ್ಮ ಮೇಲೆ ಕುಳಿತು ನೋಡ್ತಾ ಇದ್ದ ಹೆಣ್ಣು ಮಕ್ಕಳ ತಾಯಿ ತಂದೆ ಕಷ್ಟ. ನಿಮಗೆಲ್ಲರಿಗೂ ಬುದ್ಧಿ ಕಲಿಸುತ್ತೇನೆ ಎಂದು ತೀರ್ಮಾನಿಸಿ ಉಲ್ಟಾ ಮಾಡಿದ್ದಾನೆ ಅನಿಸಿತು.

—ಜಯಲಕ್ಷ್ಮಿ ವೀರಣ್ಣ

### ಕಣ್ಣಿಗೆ ಕಟ್ಟುವಂಥ ಮಾಹಿತಿ

'ಯೋಸೆಮಿಟಿ; ಜೀವವೈವಿಧ್ಯದ ವಿಸ್ಮಯ ತಾಣ' (ಜೂ. 26, ಗಣೇಶ ಭಟ್ಟ) ಬಹಳ ಚೆನ್ನಾಗಿದೆ. ಆ ಪ್ರದೇಶದ ಭೌಗೋಳಿಕ ಹಿನ್ನೆಲೆ ಹಾಗೂ ಮೂಲನಿವಾಸಿಗಳನ್ನು ಓಡಿಸಿ ವಿದೇಶಿಯರ ಅತಿಕ್ರಮಣಕ್ಕೆ ಗುರಿಯಾಗಿರುವ, ಪ್ರಸ್ತುತ ಚಾರಣಿಗರಿಗೆ ಮತ್ತು ಪ್ರವಾಸೋದ್ಯಮಕ್ಕೆ ತೆರೆದಿರುವ ಮಾಹಿತಿ ಕಣ್ಣಿಗೆ ಕಟ್ಟುವಂತೆ ಓದಿಸಿಕೊಂಡು ಹೋಯಿತು.

—ಪರಮೇಶ್ವರ ಜೆ.ಎಂ., ಬಳ್ಳಾರಿ



### ನೋಡಲೇಬೇಕಾದ ತಾಣ

ಅದ್ಭುತ ಲೇಖನ. ನಾನು ಕೂಡ ಈ ವಿಸ್ಮಯ ತಾಣವನ್ನು ನೋಡಿ ಕಣ್ತುಂಬಿಕೊಂಡಿದ್ದೇನೆ. ಲೇಖನದಲ್ಲಿ ಹೆಸರಿಸಿರುವ ಎಲ್ಲ ಸ್ಥಳಗಳನ್ನು ನೋಡಿದ್ದೇನೆ. ಮಾರಿಪೋಸದ ಮರಗಳ ಟೊಂಗೆಯ ಮಧ್ಯೆ ನಿಂತು ಭಾವಚಿತ್ರ ತೆಗೆಸಿಕೊಂಡಿದ್ದೇನೆ. ಲೇಖಕರು ಹೇಳಿದಂತೆ ಇದೊಂದು ನೋಡಲೇಬೇಕಾದ ತಾಣ.

—ಟಿ.ಎಸ್. ನಾಗರಾಜ ರಾವ್

### ನೋಡುವ ಆಸೆ ಹುಟ್ಟಿತು

ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಯೋಸೆಮಿಟಿಯ ಪ್ರವಾಸ ಕಥನ ತುಂಬಾ ಚೆನ್ನಾಗಿ ಮೂಡಿಬಂದಿದೆ. ಅಲ್ಲಿನ ಪ್ರತಿಯೊಂದು ತಾಣವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ನಿಜಕ್ಕೂ ಜೀವನದಲ್ಲಿ ಒಮ್ಮೆಯಾದರೂ ಈ ಸ್ಥಳವನ್ನು ನೋಡಲೇಬೇಕೆಂಬ ಹೆಬ್ಬಯಕೆ ನನ್ನಲ್ಲಿ ಚಿಗುರೊಡೆಯಿತು.

—ಗಾಯತ್ರಿ ವೆಂಕಟೇಶ್, ಮೈಸೂರು

### ಇಂಥ ಬರಹಗಳು ಪ್ರಕಟಗೊಳ್ಳಲಿ

ಯೋಸೆಮಿಟಿ ಕುರಿತು ಓದುಗರಿಗೆ ಸಂಪೂರ್ಣ ಮಾಹಿತಿ ನೀಡುವ ಪ್ರಯತ್ನ ಮಾಡಿದ್ದಾರೆ ಲೇಖಕರು. ಇಂತಹ ಮಾಹಿತಿಗಳನ್ನು ಒಳಗೊಂಡ ಲೇಖನಗಳನ್ನು ಹೆಚ್ಚು ಹೆಚ್ಚು ಪ್ರಕಟಿಸಲಿ.

—ಶೀಲಾ ಗಣೇಶ್

### ಬಾಲ್ಯದ ದಿನಗಳನ್ನು ನೆನಪಿಸಿದ ಕಥೆ

'ನನ್ನ ಕೋಣೆ' (ಜೂ. 26, ಗೀತಾ ಸೀತಾರಾಮ್) ಕಥೆ ಓದುವಾಗ ಬಾಲ್ಯದ ದಿನಗಳು ನೆನಪಾದವು. ಒಂದೇ ಕೋಣೆಯಲ್ಲಿ ಇಬ್ಬರು ಮೂವರು ಸೇರಿ ಅವರವರ ಪಾಠ ಓದುತ್ತಿದ್ದೆವು. ಹಜಾರದಲ್ಲಿ ಹಾಸಿಕೊಂಡು ಒಟ್ಟಿಗೆ ಮಲಗುತ್ತಿದ್ದೆವು. ನಿದ್ದೆ ಚೆನ್ನಾಗಿ ಬರುತ್ತಿತ್ತು. ಈಗ ಅವರವರ ಕೋಣೆ ಎಂದಾಗಿ ಅವರದೇ ಲೋಕದಲ್ಲಿರುತ್ತಾರೆ.



—ಉಷಾ ರಾಜಾ ರಾವ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in